# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

**ಸಿ. ಸಿ. ನಂ.32/2017**

| ಹೆಸರು ಶ್ರೀ/ಶ್ರೀಮತಿ | ವಿಜಯಕುಮಾರ | ಸಿಡಬ್ಲ್ಯೂ-03 | ಪಿಡಬ್ಲ್ಯೂ-04 |
|---|---|---|---|
| ತಂದೆಯ/ಗಂಡನ ಹೆಸರು | ಚೆನ್ನ ಮಲ್ಲಯ ಮಠ | | |
| ವಯಸ್ಸು | 37 ವರ್ಷ | | |
| ಉದ್ಯೋಗ | ಒಕ್ಕಲುತನ | | |
| ವಾಸ ಸ್ಥಳ | ಹಂಚಲಿ ಗ್ರಾಮ, ತಾಃ ಸಿಂದಗಿ | | |

ದಿನಾಂಕ 12-04-2023

ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ಈಗ ತೋರಿಸುತ್ತಿರುವ ದಾಖಲೆ ಮೇಲಿರುವ ಸಹಿ ನನ್ನದೆ ಇರುತ್ತದೆ. ಸಾಕ್ಷಿ ಗುರುತಿಸಿದ ದಾಖಲೆ ಶವಪಂಚನಾಮೆಯಾಗಿದ್ದು ಅದನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ನಮ್ಮ ಊರಿನ ಯಲ್ಲಪ್ಪ ತಂದೆ ಸುರೇಶ ಇವರು ಅಪಘಾತದಲ್ಲಿ ಮೃತಪಟ್ಟಿದ್ದು ಅವರ ಶವಪಂಚನಾಮೆಯನ್ನು ಸರಕಾರಿ ಆಸ್ಪತ್ರೆ ಸೇಡಂ ಇಲ್ಲಿ ಮಾಡಿರುತ್ತೇನೆ.

ಈಗ ತೋರಿಸುತ್ತಿರುವ ಇನ್ನೊಂದು ದಾಖಲೆ ಮೇಲಿರುವ ಸಹಿ ನನ್ನದೆ ಇರುತ್ತದೆ. ಸಾಕ್ಷಿ ಗುರುತಿಸಿದ ದಾಖಲೆಯು ಗುನ್ನಾ ಸ್ಥಳದ ಪಂಚನಾಮೆಯಾಗಿದ್ದು ಅದನ್ನು ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ನಿಪಿ-3 ಕ್ಕೆ ಎಲ್ಲಿ ಸಹಿ ಹಾಕಿರುತ್ತೇನೆ ಎಂದು ನೆನಪಿಗೆ ಬರುತ್ತಿಲ್ಲ.

**(ಈ ಹಂತದಲ್ಲಿ ಸ.ಸ.ಅ.ರವರು ವಿನಂತಿಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.)**

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ದಿನಾಂಕ 30.11.2016 ರಂದು ಬೆಳಗ್ಗೆ 09.00 ಗಂಟೆಯಿಂದ 10.00 ಗಂಟೆಯ ನಡುವಿನ ಅವಧಿಯಲ್ಲಿ ಹನುಮಂತ ದಾಸರ ಇವರ ಹೊಲದ ಹತ್ತಿರ ಹಂದರಕಿ ಗ್ರಾಮದ ಕಡೆಗೆ ಹೋಗುವ ದಾರಿಯಲ್ಲಿ ರಸ್ತೆ ಅಪಘಾತವಾಗಿದ್ದರಿಂದ ನಾನು ಪಂಚನಾಮೆಯಲ್ಲಿ ಭಾಗವಹಿಸಿ

ಸ್ಥಳದಿಂದ ಹೊಂಡಾ ಶೈನ ಕಂಪನಿಯ ಮೋಟಾರ ಸೈಕಲ ಮತ್ತು ಟಿಪ್ಪರ ವಾಹನವನ್ನು ನನ್ನ ಸಮಕ್ಷಮ ಜಪ್ತುಪಡಿಸಿಕೊಳ್ಳಲಾಗಿರುತ್ತದೆ ಎಂದರೆ ಸರಿ. ಆಗ ಪಂಚನಾಮೆ ನಾಮೆ ಬರೆದ ನಂತರ ನಾನು ನನ್ನ ಸಹಿ ಮಾಡಿರುತ್ತೇನೆ ಎಂದರೆ ಸರಿ. ಈಗ ತೋರಿಸುತ್ತಿರುವ ಪೋಟೋದಲ್ಲಿರುವ ಎರಡು ವಾಹನಗಳನ್ನು ನನ್ನ ಸಮಕ್ಷಮ ಜಪ್ತುಪಡಿಸಿಕೊಳ್ಳಲಾಗಿರುತ್ತದೆ ಎಂದರೆ ಸರಿ. ಪೋಟೋಗಳನ್ನು ನಿಪಿ-4 ರಿಂದ 7 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ ಹೆಚ್. ಎಲ್. ಎ. ಆರೋಪಿ ಪರ ವಕೀಲರಿಂದ**

ನನಗೆ ಪಂಚನಾಮೆಗೆ ಕರೆದಾಗ ನಾನು ನಮ್ಮ ಊರಿನ ಮನೆಯಲ್ಲಿ ಇದ್ದೆ. ಶವ ಪಂಚನಾಮೆಗೆ ಕರೆದಾಗ ರಾತ್ರಿ 01.00 ಗಂಟೆ ಆಗಿರಬಹುದು. ಸ್ಥಳ ಪಂಚನಾಮೆಯನ್ನು ಅದೇ ಸಮಯಕ್ಕೆ ಮಾಡಿರುತ್ತೇನೆ. ಅದನ್ನು ಹೊರತುಪಡಿಸಿ ನನಗೆ ಪೊಲೀಸರು ಸರಕಾರಿ ಆಸ್ಪತ್ರೆಗೆ ಕರೆಯಿಸಿರುತ್ತಾರೆ. ನನಗೆ ಶವ ಪಂಚನಾಮೆ ಮಾಡಲು ಪೊಲೀಸರು ಕರೆದಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಸ್ಥಳ ಪಂಚನಾಮೆಗೆ ಕರೆಯಿಸಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸಹಿಯನ್ನು ಸರಕಾರಿ ಆಸ್ಪತ್ರೆಯಲ್ಲಿ ಮಾಡಿರುತ್ತೇನೆ. ನಾನು ಘಟನಾ ಸ್ಥಳದಲ್ಲಿ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಪಂಚನಾಮೆ ಮಾಡಿಲ್ಲ ಮೃತರ ಕುಟುಂಬಕ್ಕೆ ಅನುಕೂಲಮಾಡಿಕೊಡುವುದರ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾಹನಗಳು ಸ್ಥಳದಲ್ಲಿಯೇ ಇದ್ದವು. ಅಪಘಾತವಾದ ವಾಹನಗಳ ಸಂಖ್ಯೆ ಹೇಳಲು ಬರುವುದಿಲ್ಲ. ನಾನು ಪೊಲೀಸರ ಕೋರಿಕೆಯ ಮೇರೆಗೆ ಮಾತ್ರ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.) ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರ. ದ. ನ್ಯಾ. ದಂ. ಸೇಡಂ.

*SYH